ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು):- ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಪ್ರತ್ಯೇಕವಾಗಿ ತರಿಸಿ ಕೊಡುತ್ತೇವೆ.

**(3) ಹಾಸನದ ಕಿಂಕೊ ಸಂಸ್ಥೆಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸೇರ್ಪಡೆ.**

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):- ಮಾನ್ಯ ಅಧ್ಯಕ್ಷರೆ ಹಾಸನದ ಪಟ್ಟಣದಲ್ಲಿರುವ ಕಿಂಕೊ ಕಾರ್ಖಾನೆಯು ಕಳೆದ ಹತ್ತಾರು ವರ್ಷಗಳಿಂದ ನಷ್ಟ ಅನುಭವಿಸುತ್ತಿದ್ದು ಮುಚ್ಚುವ ಸ್ಥಿತಿಗೆ ಬಂದಿದೆ. ಈ ಕಾರ್ಖಾನೆಯಲ್ಲಿ ಸುಮಾರು 350 ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಕಳೆದ 6 ವರ್ಷಗಳಿಂದ ಈ ಕಾರ್ಖಾನೆಯಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ಸುಗಳ ಬಾಡಿಗಳನ್ನು ಕಟ್ಟುವ ಕೆಲಸ ಮಾಡುತ್ತಿದ್ದಾರೆ. ತಿಂಗಳು ಒಂದಕ್ಕೆ 25ಕ್ಕೂ ಮೇಲ್ಪಟ್ಟು ಬಸ್‌ಗಳ ಬಾಡಿ ಕಟ್ಟುತ್ತಿದ್ದಾರೆ. ಮತ್ತು ಈ ಕೆಲಸದಲ್ಲಿ ನಿಪುಣತೆಯನ್ನು ಪಡೆದಿದ್ದಾರೆ. ಹಿಂದೆ ಈ ಕಾರ್ಖಾನೆಯಲ್ಲಿ ವ್ಯವಸಾಯದ ಉಪಕರಣಗಳನ್ನು ತಯಾರಿಸುತ್ತಿದ್ದರು. ಕೆ.ಎಸ್.ಆರ್.ಟಿ.ಸಿ ಗೆ ಬಸ್‌ಗಳ ಬಾಡಿಗಳನ್ನು ಕಟ್ಟಲು ಶುರು ಮಾಡಿದ ಮೇಲೆ, ವ್ಯವಸಾಯದ ಉಪಕರಣಗಳನ್ನು ತಯಾರಿಸುತ್ತಿದ್ದ ಮೆಷಿನ್‌ಗಳನ್ನು ಮಾರಾಟ ಮಾಡಿರುತ್ತಾರೆ. ಬಸ್‌ಗಳ ಬಾಡಿಗಳನ್ನು ಕಟ್ಟುವ ಕೆಲಸವನ್ನು ಮಾತ್ರ ಮಾಡಬೇಕಾಗಿದೆ. ಈ ಕಾರಣಗಳಿಂದ ಹಾಸನದ ಕಿಂಕೊ ಫ್ಯಾಕ್ಟರಿಯನ್ನು ಕೆ.ಎಸ್.ಆರ್.ಟಿ.ಸಿ.ಗೆ ವಹಿಸಿ ಕೊಟ್ಟು ಕಾರ್ಖಾನೆಯ ಉಳಿವಿಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರವನ್ನು ಕೊಡುತ್ತಿದ್ದೇನೆ.

ಹಿಂದೆ ಮೈಸೂರು ಇಂಪ್ಲಿಮೆಂಟ್ಸ್ ಫ್ಯಾಕ್ಟರಿ, ಹಾಸನದಲ್ಲಿ ನಡೆಯುತ್ತಿದ್ದು ಆಗ ಸದರಿ ಕಂಪನಿಯಲ್ಲಿ ವ್ಯವಸಾಯದ ಉಪಕರಣಗಳನ್ನು ತಯಾರಿಸುತ್ತಿತ್ತು. 1975ರಲ್ಲಿ ಬೆಂಗಳೂರಿನ ಸರ್ಕಾರಿ ಕೇಂದ್ರ ಕೈಗಾರಿಕೆ ವರ್ಕ್‌ಶಾಪ್(ಸಿ.ಐ.ಡಬ್ಲ್ಯೂ ಮತ್ತು ಹಾಸನದ ಇಂಪ್ಲಿಮೆಂಟ್ಸ್ ವರ್ಕ್‌ಶಾಪ್ ಇವುಗಳನ್ನು ಒಟ್ಟುಗೂಡಿಸಿ ಕಿಂಕೊ ಕಾರ್ಖಾನೆಯನ್ನು ಸ್ಥಾಪಿಸಲಾಯಿತು. ಕಿಂಕೊ ಕಂಪನಿಯು 1986ರ ನಂತರ ಬೆಂಗಳೂರು ಮತ್ತು ಹಾಸನದಲ್ಲಿರುವ ಘಟಕಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳಿಗೆ ಬಾಡಿ ಕಟ್ಟುವ ಕೆಲಸವನ್ನು ಮಾಡುತ್ತಿದೆ. ಹಲವಾರು ಕಾರಣಗಳಿಂದ ಕಂಪನಿಯು ತೀವ್ರ ನಷ್ಟ ಅನುಭವಿಸುತ್ತಾ ಬಂದು, ಈಗ ಇದರ ಒಟ್ಟು ನಷ್ಟ 1967–74 ಲಕ್ಷ ರೂ.ಗಳು ಆಗಿದೆ.

ಸುಧಾರಿಸದ ಕಾರ್ಖಾನೆಯ ಈ ಪರಿಸ್ಥಿತಿಯನ್ನು ಕಂಡು, ಹಾಗೂ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ರಚಿಸಿದ್ದ ಸಮಿತಿಯ ವರದಿಯನ್ನು ಗಣನೆಗೆ ತೆಗೆದುಕೊಂಡು ಹಾಗೂ ಸಚಿವ ಸಂಪುಟ ಉಪಸಮಿತಿಯ ವರದಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರಿ ಆದೇಶ ಸಂಖ್ಯೆ:ಸಿಐ.47 ಸಿಐಎಸ್.91 ದಿನಾಂಕ:31–10–1991ರ ಪ್ರಕಾರ ಕಿಂಕೊ ಸಂಸ್ಥೆಯನ್ನು ಮುಚ್ಚಲು ಆದೇಶ ಹೊರಡಿಸಲಾಯಿತು. ತದನಂತರ ಬಿ.ಎಚ್.ಇ.ಎಲ್ ಸಂಸ್ಥೆಯು ಕಿಂಕೊ ಕಾರ್ಖಾನೆಯನ್ನು ತೆಗೆದುಕೊಳ್ಳಲು ತನ್ನ ಆಶಯವನ್ನು ವ್ಯಕ್ತಪಡಿಸಿತ್ತು. ಆದರೆ ಈವರೆಗೆ ತನ್ನ ಅಂತಿಮ ನಿರ್ಧಾರವನ್ನು ರಾಜ್ಯ ಸರ್ಕಾರಕ್ಕೆ ತಿಳಿಸಿರುವುದಿಲ್ಲ. ಈ ಮಧ್ಯೆ ಅಂದಿನ ಮುಖ್ಯಮಂತ್ರಿಗಳು ಕಳೆದ ವರ್ಷದ ಆಯವ್ಯಯ ಪತ್ರವನ್ನು ಮಂಡಿಸುವ ಸಮಯದಲ್ಲಿ ಹಾಸನದ ಘಟಕವನ್ನು ಕೃಷಿ ಉಪಕರಣ ತಯಾರಿಕಾ ಘಟಕವಾಗಿ ಜಂಟಿ ವಲಯದಲ್ಲಿ ಬಲಗೊಳಿಸುವ ಇಚ್ಛೆಯನ್ನು ವ್ಯಕ್ತಪಡಿಸಿದ್ದರು. ಅದಕ್ಕೆ ಅನುಗುಣವಾಗಿ ಅಭಿವೃದ್ಧಿ ಆಯುಕ್ತರು ಸಭೆಯೊಂದನ್ನು ಕರೆದಿದ್ದರು. ಈ ಸಭೆಯಲ್ಲಿ ಕೆ.ಎಸ್.ಐ.ಐ.ಡಿ.ಸಿಯನ್ನು ಇದಕ್ಕೆ ಸಂಬಂಧಪಟ್ಟಂತೆ ಒಂದು ಕೂಲಂಕುಷವಾದ

ವರದಿಯನ್ನು ಸರ್ಕಾರಕ್ಕೆ ಕಳುಹಿಸಲು ಕೇಳಿಕೊಂಡಿದ್ದರು. ಈ ವರದಿಯು ಈವರೆಗೆ ಸರ್ಕಾರಕ್ಕೆ ಬಂದಿರುವುದಿಲ್ಲ. ಈ ಮಧ್ಯೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕಿಂಕೊ ಸಂಸ್ಥೆಯನ್ನು ತನ್ನದಾಗಿಸಿಕೊಳ್ಳಲು ಮುಂದೆ ಬಂದಿದೆ.

ಇದೆಲ್ಲ ವಿಷಯಗಳು ಸರ್ಕಾರದ ಸಧ್ಯದ ಪರಿಶೀಲನೆಯಲ್ಲಿದೆ. ಇದನ್ನೆಲ್ಲ ಸಂಬಂಧಪಟ್ಟ ವರೊಂದಿಗೆ, ಹಣಕಾಸು ಇಲಾಖೆ ಮತ್ತು ಹಣಕಾಸು ಸಂಸ್ಥೆಗಳೊಂದಿಗೆ ಹಾಗೂ ಬಿ.ಐ.ಎಫ್.ಆರ್. (B.I.F.R) ಸಂಸ್ಥೆಯೊಂದಿಗೆ ಸಮಾಲೋಚನೆ ನಡೆಸಿ ಆದಷ್ಟು ಬೇಗನೆ ಸರ್ಕಾರವು ಒಂದು ವಿಧಾನವನ್ನು ತೆಗೆದುಕೊಳ್ಳುವುದು.

**4. ಇಲಾಖಾ ನೇಮಕಾತಿ ಸಮಿತಿಗಳ ಪುನರ್ರಚನೆಗೆ ಒತ್ತಾಯ.**

ಶ್ರೀ ಪಿ. ಬಸವರಾಜ್ (ಬಹ್ಮಾವರ):- ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಇಲಾಖೆಗಳ ಕೆಲಸ ಕಾರ್ಯಕ್ಕೆ ಅನುಕೂಲವಾಗಲು ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು, ಅಧಿಕಾರಿ ಮತ್ತು ಅಧಿಕಾರೇತರ ಸದಸ್ಯರನ್ನೊಳಗೊಂಡ ಇಲಾಖಾ ನೇಮಕಾತಿ ಸಮಿತಿಗಳನ್ನು ರಚಿಸುವ ಪರಿಹಾರ ಈ ಹಿಂದೆ ಇರುತ್ತಿದ್ದು ಇತ್ತೀಚೆಗೆ ಕೆಲ ವರ್ಷಗಳಲ್ಲಿ ಹಲವು ಇಲಾಖೆಗಳ ನೇಮಕಾತಿ ಸಮಿತಿಗಳು ಪುನರ್ರಚನೆಯಾಗದೆ ಇಲಾಖೆಗಳಲ್ಲಿ ಅನೇಕ ಹುದ್ದೆಗಳು ಖಾಲಿ ಇರುತ್ತಿದ್ದು ಸಾರ್ವಜನಿಕರ ಕೆಲಸಕಾರ್ಯಗಳಿಗೆ ಅಡಚಣೆ ಉಂಟಾಗುತ್ತಿದೆ. ಇನ್ನೊಂದು ಕಡೆ ಪಶುಸಂಗೋಪನ ಮತ್ತು ಪಶುವೈದ್ಯಕೀಯ ಇಲಾಖೆಯ ಇಲಾಖಾ ನೇಮಕಾತಿ ಸಮಿತಿಯನ್ನು 1992ರ ಅಕ್ಟೋಬರ್‌ನಲ್ಲಿ ಸರಕಾರವು ಪುನರ್ ರಚಿಸಿರುತ್ತಿದ್ದು ಇದರಲ್ಲಿ ಕೇವಲ ಅಧಿಕಾರಿ ಸದಸ್ಯರನ್ನು ಮಾತ್ರ ಒಳಗೊಂಡಿದ್ದು ಅಧಿಕಾರೇತರ ಸದಸ್ಯರನ್ನು ಕೈಬಿಡಲಾಗಿದೆ. ಇದರಿಂದ ಸಾರ್ವಜನಿಕ ಪ್ರಮುಖರಿಗೆ ಮತ್ತು ಪರಿಣತರಿಗೆ ಸಂಬಂಧಪಟ್ಟ ಇಲಾಖೆಗಳ ನೇಮಕಾತಿ ಸಮಿತಿಗಳಲ್ಲಿ ಸೇವೆ ಸಲ್ಲಿಸುವ ಅವಕಾಶವನ್ನು ನಿರಾಕರಿಸಿದಂತಾಗಿದೆ. ಇಂಥ ನೇಮಕಾತಿ ಸಮಿತಿಗಳನ್ನು ರಚಿಸುವ ಸರಕಾರದ ಮೂಲ ಉದ್ದೇಶಕ್ಕೆ ಅನುಗುಣವಾಗಿಲ್ಲ.

ಎಲ್ಲಾ ಇಲಾಖೆಗಳಲ್ಲಿ ಅಧಿಕಾರೇತರ ಸದಸ್ಯರನ್ನೊಳಗೊಂಡಂಥ ಇಲಾಖಾ ನೇಮಕಾತಿ ಸಮಿತಿಗಳನ್ನು ಪುನರ್ ರಚಿಸಬೇಕೆಂದು ಮತ್ತು ಈಗಾಗಲೇ ಅಧಿಕಾರೇತರ ಸದಸ್ಯರನ್ನು ಬಿಟ್ಟು ರಚಿಸಿದ ನೇಮಕಾತಿ ಸಮಿತಿಗಳನ್ನು ಸಾರ್ವಜನಿಕ ಹಿತದೃಷ್ಟಿಯಲ್ಲಿ ಪುನರ್ ರಚಿಸಬೇಕೆಂದು ಮುಖ್ಯಮಂತ್ರಿಗಳನ್ನು ಈ ಮೂಲಕ ಒತ್ತಾಯ ಪಡಿಸುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿ):- ಮಾನ್ಯ ಅಧ್ಯಕ್ಷರೆ, ಮುಂದಿನ ವಿಷಯವನ್ನು ಚರ್ಚೆ ಮಾಡುವುದಕ್ಕೆ, ಅಂದರೆ ನೆರೆಹಾವಳಿ ಬಗ್ಗೆ ಚರ್ಚೆ ಮಾಡುವುದಕ್ಕೆ ಮುಂಚೆ ಕೆಲವು ವಿಧೇಯಕಗಳನ್ನು ಮಂಡಿಸುವುದು ಉತ್ತಮ. ಏಕೆಂದರೆ ಇದನ್ನು ಮಾಡದೇ ಇದ್ದರೆ ನಾಳೆ ವಿಧಾನಪರಿಷತ್ತಿನಲ್ಲಿ ಕೆಲಸ ಇರುವುದಿಲ್ಲ. ಈಗ ಇವುಗಳನ್ನು ಇಲ್ಲಿ ಪಾಸ್ ಮಾಡಿ ಕಳುಹಿಸಿದರೆ, ಸಂಜೆ ಎಷ್ಟು ಹೊತ್ತು ಬೇಕಾದರೂ ನೆರೆಹಾವಳಿ ಬಗ್ಗೆ ಚರ್ಚೆ ಮಾಡಬಹುದು.

ಶ್ರೀ ಪಿ. ಬಸವರಾಜ್:- ಅಧ್ಯಕ್ಷರೆ, ನನಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು:- ಉತ್ತರವನ್ನು ಕಳುಹಿಸಿಕೊಡುತ್ತಾರೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಹೌದು, ಉತ್ತರ ಕಳಿಸಿಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ಮಾಡಿದ್ದರ ಪ್ರಕಾರ ಬಿಲ್‌ಗಳನ್ನು ಪಾಸ್ ಮಾಡಿ ಕೊಟ್ಟಿದ್ದೇವೆ. ರೈತರ ಸಮಸ್ಯೆ ಬಂದಾಗ ಬೇರೆಬೇರೆ ಕಾರಣಗಳಿಂದ ಅದು ಮುಂದೆ ಹೋಗುತ್ತಿದೆ. ಈ ವಿಚಾರ ಪ್ರಾರಂಭದಲ್ಲೇ